# ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ
# ರಾಜ್ಯ ಮಟ್ಟದ ಉಸ್ತುವಾರಿ ಸಂಸ್ಥೆ
## ಕ್ರೇಡಿಟ್ ಲಿಂಕ್ಡ್ ಸಬ್ಸಿಡಿ ಸ್ಕೀಮ್ ( ಇಡಬ್ಲ್ಯೂಎಸ್/ ಎಲ್.ಐ.ಜಿ ಹಾಗೂ ಎಂ.ಐ.ಜಿ –1/ ಎಂ.ಐ.ಜಿ–2)

**ಕ್ರೇಡಿಟ್ ಲಿಂಕ್ಡ್ ಸಬ್ಸಿಡಿ ಸ್ಕೀಮ್ :**

- ಕೇಂದ್ರ ಸರ್ಕಾರವು ನಗರದ ಎಲ್ಲಾ ವಸತಿ ರಹಿತ ಕುಟುಬಗಳಿಗೆ 2022 ರ ಅವಧಿಯೊಳಗೆ ವಸತಿ ಸೌಲಭ್ಯ ಒದಗಿಸಲು "ಪ್ರಧಾನ ಮಂತ್ರಿ ಆವಾಸ್ ಯೋಜನೆ – ಹೌಸಿಂಗ್ ಫಾರ್ ಆಲ್" ಯನ್ನು ಜೂನ್ 2015 ರಲ್ಲಿ ಜಾರಿಗೆ ತಂದಿದೆ. "ಕ್ರೆಡಿಟ್ ಲಿಂಕ್ಡ್ ಸಬ್ಸಿಡಿ ಸ್ಕೀಮ್ (ಸಿ.ಎಲ್.ಎಸ್.ಎಸ್)" ಈ ಯೋಜನೆಯ ಒಂದು ಘಟಕವಾಗಿದೆ.
- "ಕ್ರೆಡಿಟ್ ಲಿಂಕ್ಡ್ ಸಬ್ಸಿಡಿ ಸ್ಕೀಮ್– ಇಡಬ್ಲ್ಯೂಎಸ್/ ಎಲ್.ಐ.ಜಿ ಯೋಜನೆಯನ್ನು ಕೇಂದ್ರ ಸರ್ಕಾರವು 17.06.2015 ರಂದು ಜಾರಿಗೊಳಿಸಿದ್ದು, ಇದರ ಅವಧಿಯು 2022 ರ ವರೆಗೆ ಇರುತ್ತದೆ.
- "ಕ್ರೆಡಿಟ್ ಲಿಂಕ್ಡ್ ಸಬ್ಸಿಡಿ ಸ್ಕೀಮ್–ಎಂ.ಐ.ಜಿ –1/ ಎಂ.ಐ.ಜಿ–2 ಯೋಜನೆಯನ್ನು ಕೇಂದ್ರ ಸರ್ಕಾರವು 01.01.2017 ರಂದು ಜಾರಿಗೊಂಡಿದ್ದು, ಇದರ ಅವಧಿಯು 31.03.2019ರ ವರೆಗೆ ಇರುತ್ತದೆ.
- "ಕ್ರೇಡಿಟ್ ಲಿಂಕ್ಡ್ ಸಬ್ಸಿಡಿ ಸ್ಕೀಮ್" ಯೋಜನೆಯನ್ನು ರಾಜ್ಯದ ಎಲ್ಲ ನಗರ ಪ್ರದೇಶಗಳಲ್ಲಿ ಮತ್ತು ಆ ನಗರದ ಪ್ಲಾನಿಂಗ್ ಏರಿಯಾ/ಡೆವಲಪ್ ಮೆಂಟ್ ಏರಿಯಾ/ ಸ್ಪೇಷಲ್ ಏರಿಯಾ/ಇಂಡಸ್ಟ್ರೀಯಲ್ ಏರಿಯಾ ಕೂಡ ಈ ಯೋಜನೆಯ ವ್ಯಾಪ್ತಿಗೆ ಒಳಪಡುತ್ತವೆ.
- ಪತಿ, ಪತ್ನಿ, ಅವಿವಾಹಿತ ಗಂಡು ಮಕ್ಕಳು ಮತ್ತು ಅವಿವಾಹಿತ ಹೆಣ್ಣು ಮಕ್ಕಳು ಇವರನ್ನು ಹೊಂದಿರುವ ಯಾವುದೇ ಕುಟುಂಬವು ಈ ಯೋಜನೆಯ ಪ್ರಯೋಜನೆ ಪಡೆಯಬಹುದಾಗಿದೆ. ಆದರೆ, ದೇಶದ ಯಾವುದೇ ಭಾಗದಲ್ಲಿ ಅವನ / ಅವಳ ಹೆಸರಿನಲ್ಲಿ ಅಥವಾ ಅವನ / ಅವಳ ಕುಟುಂಬದ ಯಾವುದೇ ಸದಸ್ಯ ಹೆಸರಿನಲ್ಲಿ ಒಂದಾದರೂ ಸ್ವಂತ ಪಕ್ಕಾ ಮನೆ ಇರಕೂಡದು. ಪಕ್ಕಾ ಮನೆ ಹೊಂದಿರದ ವಯಸ್ಕ ದುಡಿಯುತ್ತಿರುವ ಮಗ / ಮಗಳು ಕೂಡ (ಮದುವೆಯಾಗದ/ ಮದುವೆಯಾಗಿರುವ) ಈ ಯೋಜನೆಯಡಿ ಪ್ರಯೋಜನೆ ಪಡೆಯಬಹುದು.
- ಈ ಯೋಜನೆಯಡಿಯಲ್ಲಿ ಅರ್ಹ ಫಲಾನುಭವಿಗಳಿಗೆ ಮನೆಯನ್ನು ಖರೀದಿಸಲು ಅಥವಾ ಮರು ಖರೀದಿಸಲು ಅಥವಾ ಹೊಸದಾಗಿ ಮನೆ ನಿರ್ಮಾಣ ಮಾಡಲು ಅಥವಾ ಹಾಲಿ ಇರುವ ಮನೆಯನ್ನು ವಿಸ್ತರಿಸಲು (ಅಂದರೆ ಪಕ್ಕಾ ಮನೆಗೆ ಕೊಠಡಿ, ಶೌಚಾಲಯ ಇತ್ಯಾದಿ ನಿರ್ಮಿಸಲು) ಅಥವಾ ರಿಪೇರಿ ಮಾಡಲು ಬ್ಯಾಂಕ್ ಗಳು ಸಾಲ ಸೌಲಭ್ಯವನ್ನು ಒದಗಿಸುತ್ತವೆ. ಈ ಸಾಲದ ಮೊತ್ತಕ್ಕೆ ವಿಧಿಸಲಾಗುವ ಬಡ್ಡಿದರದಲ್ಲಿ ಈ ಕೆಳಕಂಡಂತೆ ಕೇಂದ್ರ ಸರ್ಕಾರ ಬಡ್ಡಿದರವನ್ನು ಭರಿಸುವುದು. ಬಾಕಿ ಬಡ್ಡಿ ಮೊತ್ತವನ್ನು ಫಲಾನುಭವಿಗಳು ಭರಿಸಬೇಕು.

| Sl.No | Items | EWS | LIG | MIG-1 | MIG-2 |
|---|---|---|---|---|---|
| 1 | Income limit (Per Annam) | up to 3.00 lakh | 3.01 to 6.00 lakh | 6.01 lakh to 12 lakh | 12.01 lakh to 18 lakh |
| 2 | Carpet Area: (Sqmt) | up to 30 | up to 60 | 160 sqmt | 200 sqmt |
| 3 | Max. Loan amount considered for interest subsidy calculation | 6.00 lakh | 6.00 lakh | 9.00 lakh | 12.00 lakh |
| 4 | Purpose | Construction/ Purchase/ Repair Extension | | Construction/ Purchase/ Repurchase | |
| 5 | Loan period | 20 Year | 20 Year | 20 year | 20 year |
| 6 | Interest subsidy (Per Annam) | 6.5% | 6.5% | 4 % | 3 % |
| 7 | Interest subsidy amount | 2.67 lakh | 2.67lakh | 2.35 lakh | 2.30 lakh |
| 8 | Incentive in lieu of Loan processing fee | 3000 | 3000 | 2,000 | 2,000 |
| 9 | Additional loan | Additional loan beyond limit will be at non subsidized rate | | | |

- ಮೇಲಿನ ಕೋಷ್ಟಕದ 3 ನೆಯ ಕ್ರಮ ಸಂಖ್ಯೆಯಲ್ಲಿ ನಮೂದಿಸಿದ ಸಾಲದ ಮೊತ್ತಕ್ಕಿಂತ ಹೆಚ್ಚಿನ ಮೊತ್ತವನ್ನು ಸಾಲವಾಗಿ ಬ್ಯಾಂಕ್ ನಿಂದ ಪಡೆದಲ್ಲಿ ಹೆಚ್ಚುವರಿ ಮೊತ್ತವನ್ನು ಸಬ್ಸಿಡಿರಹಿತವಾಗಿ ನೀಡಲಾಗುವುದು. ಕ್ರೆಡಿಟ್ ಲಿಂಕ್ಡ್ ಸಬ್ಸಿಡಿ ಯೋಜನೆಯ ಬಡ್ಡಿ ಸಹಾಯಧನವು 3 ನೆಯ ಕ್ರಮ ಸಂಖ್ಯೆಯಲ್ಲಿ ನಮೂದಿಸಿದ ಸಾಲದ ಮೊತ್ತಕ್ಕೆ ಸೀಮಿತವಾಗಿದೆ.
- ಸಾಲದ ಗರಿಷ್ಠ ಅವಧಿ 20 ವರ್ಷಗಳಾಗಿದೆ.
  ಫಲಾನುಭವಿಗಳು ನೇರವಾಗಿ ಅಥವಾ ನಗರ ಸ್ಥಳೀಯ ಸಂಸ್ಥೆಯ ಮೂಲಕ ಸಾಲವನ್ನು ಪಡೆಯಲು ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಸಲ್ಲಿಸಬಹುದು. ಯೋಜನೆಯು ಜಾರಿಗೊಂಡ ನಂತರದಲ್ಲಿ ಗೃಹಸಾಲ ಪಡೆದ ಕುಟುಂಬಗಳು ಕೂಡ ಈ ಯೋಜನೆಯಡಿ ಪ್ರಯೋಜನೆ ಪಡೆಯಬಹುದು.
- ಇ.ಡಬ್ಲ್ಯೂ.ಎಸ್ & ಎಲ್.ಐ.ಜಿ ವರ್ಗದ ಫಲಾನುಭವಿಯು ಅನುಕ್ರಮವಾಗಿ 30 ಚಮೀ 7 60 ಚ.ಮೀಗಿಂತ ಹೆಚ್ಚಿನ ವಿಸ್ತೀರ್ಣದ (ಕಾರ್ಪೆಟ್ ಏರಿಯಾ) ಮನೆ ನಿರ್ಮಿಸಲು ಇಚ್ಚಿಸಿದರೂ ಸಬ್ಸಿಡಿ ಮೊತ್ತವು ಕೇವಲ 6 ಲಕ್ಷ ಮೊತ್ತಕ್ಕೆ ಮಾತ್ರ ಸೀಮಿತವಾಗಿರುತ್ತವೆ. ಇ.ಡಬ್ಲ್ಯೂ.ಎಸ್ ವರ್ಗದವರು ಮತ್ತು ಎಲ್.ಐ.ಜಿ ವರ್ಗದವರು ಮನೆ ವಿಸ್ತರಿಸಿಕೊಳ್ಳಲು ಬಯಸಿದ್ದಲ್ಲಿ/ ರಿಪೇರಿ ಮಾಡಿಕೊಳ್ಳಲು ಬಯಸಿದ್ದಲ್ಲಿ ಅನುಕ್ರಮವಾಗಿ ಕಾರ್ಪೆಟ್ ಏರಿಯಾ 30 ಚ.ಮೀ ವಿಸ್ತೀರ್ಣ & 60 ಚ.ಮೀ ವಿಸ್ತೀರ್ಣದ ಮಿತಿಯೊಳಗಿರಬೇಕು. ಎಲ್ಲಾ ಮನೆಗಳಲ್ಲಿ ಕಡ್ಡಾಯವಾಗಿ ಶೌಚಾಲಯ ಸೌಲಭ್ಯ ಇರತಕ್ಕದ್ದು. ಎಂ.ಐ.ಜಿ 1 & 2 ವರ್ಗದವರು ಗರಿಷ್ಠ 160 ಚಮೀ ಮತ್ತು 200 ಚಮೀ ರಷ್ಟು ಮಾತ್ರವೇ ಮನೆ ನಿರ್ಮಿಸಿಕೊಳ್ಳತಕ್ಕದ್ದು.
- ಫಲಾನುಭವಿಯ ಖಾತೆಗೆ ಬಡ್ಡಿ ಸಹಾಯಧನದ ಮೊತ್ತವನ್ನು ಬ್ಯಾಂಕ್‌ಗಳು ಮುಂಗಡವಾಗಿ ಜಮಾ ಮಾಡುವವು. ಇದರಿಂದಾಗಿ ಮಾಸಿಕ ಕಂತಿನ (ಇಎಂಐ) ಮೊತ್ತದಲ್ಲಿ ಕಡಿಮೆಯಾಗುವುದು.

| CLSS - Illustrative Example ( Loan tenure -20* years/240 months ) | | | | | | | | |
|---|---|---|---|---|---|---|---|---|
| | Loan Amount | Loan Amount eligible for Subsidy | Interest Subsidy | Balance Loan | Initial EMI @10% | Reduced EMI after crediting Subsidy | Monthly savings | Annual savings |
| EG | (1) | (2) | (3) | (4)=(1-3) | (5) | (6) | (7) = (5-6) | (8)= (7) x 12 |
| EWS/LIG | | | | | | | | |
| I | 3,00,000 | 3,00,000 | 1,33,640 | 1,66,360 | 2,895 | 1,605 | 1,290 | 15,480 |
| II | 6,00,000 | 6,00,000 | 2,67,280 | 3,32,720 | 5,790 | 3,211 | 2,579 | 30,948 |
| III | 10,00,000 | 6,00,000 | 2,67,280 | 7,32,720 | 9,650 | 7,071 | 2,579 | 30,948 |
| MIG 1 | | | | | | | | |
| I | 6,00,000 | 6,00,000 | 1,56,712 | 4,43,288 | 5,790 | 4,278 | 1,512 | 18,144 |
| II | 9,00,000 | 9,00,000 | 2,35,068 | 6,64,932 | 8,685 | 6,417 | 2,268 | 27,216 |
| III | 12,00,000 | 9,00,000 | 2,35,068 | 9,64,932 | 11,580 | 9,312 | 2,268 | 27,216 |
| MIG 2 | | | | | | | | |
| I | 9,00,000 | 9,00,000 | 1,72,617 | 7,27,383 | 8,685 | 7,019 | 1,666 | 19,992 |
| II | 12,00,000 | 12,00,000 | 2,30,156 | 9,69,844 | 11,580 | 9,359 | 2,221 | 26,652 |
| III | 15,00,000 | 12,00,000 | 2,30,156 | 12,69,844 | 14,475 | 12,254 | 2,221 | 26,652 |

- ಒಂದೇ ಕುಟುಂಬಕ್ಕೆ ಒಂದಕ್ಕಿಂತ ಹೆಚ್ಚು ಮನೆಗಳ ಪಡೆಯುವುದನ್ನು / ದುರ್ಬಳಕೆಯಾಗುವುದನ್ನು ತಡೆಗಟ್ಟಲು ಫಲಾನುಭವಿಯ ಆಧಾರ್ ಸಂಖ್ಯೆ ಲಿಂಕ್ ಮಾಡಲಾಗುವುದು.
- ಬ್ಯಾಂಕ್‌ಗಳಿಗೆ ಮಂಜೂರು ಮಾಡಿದ ಇ.ಡಬ್ಲ್ಯೂ.ಎಸ್ & ಎಲ್.ಐ.ಜಿ ವರ್ಗದ ಪ್ರತಿ ಅಪ್ಲಿಕೇಶನ್‌ಗಳಿಗೆ ರೂ.3000/– ಮೊತ್ತವನ್ನು ಮತ್ತು ಎಂ.ಐ.ಜಿ 1 & 2 ವರ್ಗದ ಪ್ರತಿ ಅಪ್ಲಿಕೇಶನ್‌ಗಳಿಗೆ ರೂ.2000/– ಮೊತ್ತವನ್ನು ಒಂದು ಬಾರಿಗೆ ನೀಡಲಾಗುತ್ತದೆ.
- ನಗರ ಸ್ಥಳೀಯ ಸಂಸ್ಥೆ ಸಿಬ್ಬಂದಿಗಳಿಗೆ ಪ್ರೋತ್ಸಾಹ ಧನವಾಗಿ ಮಂಜೂರಾದ ಪ್ರತಿ ಅಪ್ಲಿಕೇಶನ್‌ಗೆ ರೂ. 250 ಮೊತ್ತವನ್ನು ಸಂದಾಯ ಮಾಡಲಾಗುತ್ತದೆ.
- ಸದರಿ ಯೋಜನೆಯಡಿ ಹುಡ್ಕೋ ಮತ್ತು ಎನ್‌ಎಚ್‌ಬಿ ಗಳನ್ನು ಕೇಂದ್ರ ನೋಡಲ್ ಸಂಸ್ಥೆ (ಸಿಎನ್‌ಎ) ಯೆಂದು ಗುರುತಿಸಲಾಗಿದೆ, ಸದರಿ ಸಂಸ್ಥೆಗಳಿಂದ ಬ್ಯಾಂಕ್‌ಗಳಿಗೆ ಸಬ್ಸಿಡಿ ಮೊತ್ತವನ್ನು ಬಿಡುಗಡೆ ಮಾಡಲಾಗುತ್ತದೆ. ಈ ಕೆಳಕಂಡ, ಬ್ಯಾಂಕ್‌ಗಳು ಈ ಯೋಜನೆಯನ್ನು ಅನುಷ್ಠಾನಗೊಳಿಸಬಹುದಾಗಿದೆ. .
    - Scheduled Commercial banks
    - Housing Finance Companies
    - Regional Rural Banks
    - State Cooperative Banks
    - Urban Cooperative Banks
    - Small Finance Banks
    - Non Banking Finance Company-Micro Finance Institutions

- ಬ್ಯಾಂಕ್ ಗಳು ಸಬ್ಸಿಡಿ ಮೊತ್ತವನ್ನು ಪಡೆಯಲು ಆಯಾ ಬ್ಯಾಂಕಿನ ಮುಖ್ಯ ಶಾಖೆಗೆ ಕ್ಲೇಮ್ಸ್ ಗಳನ್ನು ಸಲ್ಲಿಸಬೇಕು. ಬ್ಯಾಂಕಿನ ಮುಖ್ಯ ಶಾಖೆಗಳು ಸಿ.ಎನ್.ಎ ಗೆ ಕ್ಲೇಮ್ಸ್ ಗಳನ್ನು ನಿಗದಿತ ನಮೂನೆಯಲ್ಲಿ ಸಲ್ಲಿಸಿ ಸಬ್ಸಿಡಿ ಒದಗಿಸುವಂತೆ ಕೋರುತ್ತವೆ. ನಂತರದಲ್ಲಿ, ಸಿ.ಎನ್.ಎ ಗಳು ಬ್ಯಾಂಕ್ ಗಳಿಗೆ ಅನುದಾನ ಬಿಡುಗಡೆ ಮಾಡುತ್ತವೆ.
- For more information please contact 080-23118888, 1800-11-3377 ; 1800-11-3388
  Website: https://ashraya.karnataka.gov.in or http://mohua.gov.in/cms/credit-linked-subsidy-scheme.php